ಕೆಳಗಿಳಿಯತೊಡಗಿದ್ದ. ಇನ್ನೊಬ್ಬ ಗೇಟಿಗೆ ಬೀಗ ಹಾಕಿ ಕಾರಿಗೆ ಹೊದಿಕೆಯನ್ನು ಹೊದಿಸತೊಡಗಿದ. ಅರುಂಧತಿ ನನ್ನ ಕಡೆ ನೋಡಿದಾಗ ಮೆಟ್ಟಿಲು ಮೂಲಕವೇ ಇಳಿಯುವುದಾಗಿ ಹೇಳಿ ಇಳಿಯ ತೊಡಗಿದ್ದೆ. ಅವಳು ಲಿಫ್ಟ್ ಪ್ರವೇಶಿಸಿದ್ದಳು. ನಾನು ಮೆಟ್ಟಿಲುಗಳ ಮೂಲಕ ನೆಲಮಹಡಿಗೆ ಇಳಿಯುವ ಹೊತ್ತಿಗೆ ಅರುಂಧತಿ ಪ್ರವೇಶದ್ವಾರದ ಹೊರಗೆ ನಿಂತಿದ್ದಳು. ಮನೆಯ ಸುತ್ತಲೂ ಎತ್ತರವಾದ, ವಿಶಾಲವಾದ ದೊಡ್ಡ ಕಾಂಪೌಂಡ್. ಮನೆಗೆ ಅಂಟಿಕೊಂಡಂತೆ ಎರಡು ಗೆಸ್ಟ್ ಹೌಸ್ ಮತ್ತು ಒಂದು ಜಿಮ್. ಕಾಂಪೌಂಡ್ ಹೊರಗೆ ಐದಾರು ಗೋಡನ್‌ಗಳು, ಮೂವತ್ತು ನಲವತ್ತು ಲೇಬರ್ ಕ್ವಾರ್ಟರ್ಸ್ ಇದ್ದವು. 'ಗೆಸ್ಟ್ ಹೌಸ್‌ನಲ್ಲಿ ಫ್ರೆಶ್ ಆಗಿ ಬನ್ನಿ. ಅಪ್ಪ ಮನೆಯಲ್ಲೇ ಇದ್ದಾರೆ, ಪರಿಚಯ ಮಾಡಿಸ್ತೀನಿ ಮತ್ತು ಎಂಟೂವರೆ ಗಂಟೆಗೆ ಅರ್ಧ ಗಂಟೆ ಡ್ಯಾನ್ಸ್ ಪ್ರೋಗ್ರಾಂ ಇದೆ. ನೀವು ಬರುವಿರೆಂದು ತಿಳಿದು ಅಪ್ಪ ಡ್ಯಾನ್ಸ್ ಪ್ರೋಗ್ರಾಂ ಫಿಕ್ಸ್ ಮಾಡಿದ್ದು. ಇಲ್ಲೇ ನೂರು ಹೆಜ್ಜೆ ದೂರದ ಕಮ್ಯುನಿಟಿ ಹಾಲ್‌ನಲ್ಲಿ. ಅಪ್ಪನಿಗೆ ಸಂಗೀತ, ನೃತ್ಯ , ಕ್ರೀಡೆ ಅಂದರೆ ತುಂಬಾ ಪ್ರಾಣ. ನಿಮಗೆ ಅರ್ಧ ಗಂಟೆ ಐದು ನಿಮಿಷಗಳಂತೆ ಕಳೆದುಹೋಗುತ್ತದೆ. ಅಲ್ಲದೆ ಅಪ್ಪ ಡ್ಯಾನ್ಸ್ ಪ್ರೋಗ್ರಾಂಗಳಿಗೆ ಇಲ್ಲಿ ಪರ್ಮನೆಂಟ್ ಗೆಸ್ಟ್. ಏಕೆಂದರೆ, ಪ್ರೋಗ್ರಾಂ ಖರ್ಚನ್ನೆಲ್ಲ ಅವರೇ ನೋಡಿಕೊಳ್ಳೋದು' ಎಂದು ಅರುಂಧತಿ ಮನೆಯೊಳಕ್ಕೆ ಹೋಗಿದ್ದಳು . ನನ್ನ ಲಗ್ಗೇಜ್ ಹೊತ್ತು ತಂದ ವ್ಯಕ್ತಿಯೊಂದಿಗೆ ನಾನು ಗೆಸ್ಟ್ ಹೌಸ್ ಪ್ರವೇಶಿಸಿದ್ದೆ. ಮೂರು ರೂಮುಗಳ ಗೆಸ್ಟ್ ಹೌಸ್ ಯಾವ ಸೆವೆನ್ ಸ್ಟಾರ್ ಹೋಟೆಲ್‌ಗಿಂತಲೂ ಕಡಿಮೆಯಿರಲಿಲ್ಲ. ಒಂದು ರೂಮ್ ಮಸಾಜ್ ಸೆಂಟರಿನಂತೆ ವಿನ್ಯಾಸಗೊಂಡಿತ್ತು. ಬಾಡಿ ಮಸಾಜಿಗೆ ಸಂಬಂಧಿಸಿದ ಟೇಬಲ್, ಚೇರ್, ಸ್ಟೀಮ್ ಬಾತ್ ಮಾಡಲು (ಸ್ಟೀಮ್ ಯಂತ್ರ) ಎಲ್ಲವೂ ಶುಭ್ರವಾಗಿ ಅಚ್ಚುಕಟ್ಟಾಗಿದ್ದವು . ಬಿಸಿಬಿಸಿ ನೀರಿನಲ್ಲಿ ಸ್ನಾನ ಮಾಡಿ ಮೆತ್ತನೆಯ ಹಾಸಿಗೆಯ ಮೇಲೆ ಒರಗಿದ್ದೆ. ತುಂಬಾ ಹಾಯೆನಿಸಿತ್ತು. ಪ್ರಕೃತಿಯ ಮಧ್ಯೆ ಬದುಕುವುದೊಂದು ಪುಣ್ಯ. ನಗರಗಳೆಂಬ ಕಾಂಕ್ರೀಟ್ ಕಾಡುಗಳಲ್ಲಿ ಆಮ್ಲಜನಕ ಶುದ್ಧವಾಗಿರುವುದಿಲ್ಲ. ಗೋಡೆಗೆ ನೇತು ಹಾಕಿದ್ದ ಗಡಿಯಾರದಲ್ಲಿ ಸಮಯ ಆರೂವರೆ ಗಂಟೆ ತೋರಿಸುತ್ತಿತ್ತು.

ಮೊಬೈಲ್ ರಿಂಗಾಗಿತ್ತು. ಕಾಕಿಗಡ್ಡ ರಾಘವರೆಡ್ಡಿಯ ಕರೆ. 'ಹಲೋ' ಎಂದಿದ್ದೆ.

'ಎಲ್ಲಾ ಮುಗಿಯಲು ಇಷ್ಟೊತ್ತಾಯಿತು ನೋಡು. ಪುಣ್ಯಕ್ಕೆ ಮಕ್ಕಳು ಮತ್ತು ಹತ್ತಿರದ ಸಂಬಂಧಿಕರೆಲ್ಲ ಹೈದರಾಬಾದಿನಲ್ಲೇ ಇದ್ದರು. ಮುಖ್ಯಮಂತ್ರಿಗಳು ಕೂಡ ಶವ ದರ್ಶನ ಮಾಡಿಕೊಂಡು ಹೋದರು ಮಧ್ಯಾಹ್ನ. ಸತ್ತವರಿಗೆ ಯಾರಿದ್ದರೇನು, ಯಾರಿಲ್ಲದಿದ್ದರೇನು ಅಲ್ಲವಾ? ಉಸಿರು ಕಳೆದುಕೊಂಡ ತಕ್ಷಣ ದೇಹ ಹೆಸರನ್ನೂ ಕಳೆದುಕೊಂಡುಬಿಡುವುದು ಬದುಕಿನ ಎಂಥಾ ಚೋದ್ಯ ಅಲ್ಲವಾ? ಮುದುಕಿ ಸುಮಾರು ಒಂದೂವರೆ ಕೋಟಿ ಕ್ಯಾಶ್ ಇಟ್ಟಿದ್ದಳು ಹಾಸಿಗೆಯ ಮಂಚದ ಕಪಾಟಿನಲ್ಲಿ . ಅದರಲ್ಲಿ ಅರ್ಧದಷ್ಟು ಮೂರು ವರ್ಷಗಳ ಹಿಂದೆ ಅಮಾನ್ಯೀಕರಣಗೊಂಡ ಹಳೆಯ ನೋಟುಗಳೂ ಸೇರಿದ್ದವು. ಅವನ್ನು ಊರಿಗೆ ಕಳಿಸಿ ಗಂಟೆಯ ಹಿಂದೆ ತೋಟದಲ್ಲಿ ಬೆಂಕಿ ಹಚ್ಚಿ ಭಸ್ಮ ಮಾಡಿದ ನಂತರವೇ ಮಕ್ಕಳು ನೆಮ್ಮದಿಯ ನಿಟ್ಟುಸಿರುಬಿಟ್ಟಿದ್ದು. ಮನುಷ್ಯನಿಗೆ ಬದುಕಿದ್ದರೂ ಸತ್ತರೂ ಮಾನ ಮರ್ಯಾದೆ ಎಷ್ಟು ಮುಖ್ಯ ನೋಡು. ನಾಳೆ ಮಧ್ಯಾಹ್ನ ಹಾಲು ತುಪ್ಪ ಮುದುಕಿಗೆ. ಮುಗಿಸಿಕೊಂಡು ನಾಡಿದ್ದು ಬೆಳಿಗ್ಗೆ ಏಳು ಗಂಟೆ ಫ್ಲೈಟಿಗೆ ಬರ್ತೀನಿ. ಅದಿರಲಿ, ಹೇಗಿದ್ದೀಯ ಅಲ್ಲಿ ನೀನು. ಚೆನ್ನಾಗಿ ಮಲೆಯಾಳಂ ಭಾಷೆ ಬರುವುದರಿಂದ ಸೊಗಸಾಗಿರ್ತೀಯ ಬಿಡು...' ಎಂದು ಒಂದೇ ಸಮನೆ ಮಾತನಾಡಿದ್ದ. 'ಹೌದು, ನಾನು ತುಂಬಾ ಕಂಫರ್ಟಬಲ್ಲಾಗಿಯೇ ಇದ್ದೀನಿ ಇಲ್ಲಿ' ಎಂದು ಚುಟುಕಾಗಿ ಉತ್ತರಿಸಿದ್ದೆ. 'ಓಕೆ ದೆನ್' ಎಂದು ಫೋನ್ ಇಟ್ಟಿದ್ದ ರಾಘವರೆಡ್ಡಿ. ಹಾಸಿಗೆಯ ಸೈಡ್ ಟೇಬಲ್ ಮೇಲಿದ್ದ ಲ್ಯಾಂಡ್ ಫೋನ್ ರಿಂಗಾಗಿತ್ತು. ಎತ್ತಿ 'ಹಲೋ' ಎಂದಿದ್ದೆ. 'ಫ್ರೆಶ್ ಆಗಿದ್ರೆ ಬನ್ನಿ, ಅಪ್ಪನ ಜೊತೆ ಶುಂಠಿ ಬೆಲ್ಲದ ಚಹಾ ಕುಡೀಬಹುದು'. ಅರುಂಧತಿಯ ಮಧುರ ವಾದ ಮಾತುಗಳು ಕಿವಿಗೆ ಹಿತವನ್ನು ತುಂಬಿದ್ದವು.

ಗೆಸ್ಟ್‌ಹೌಸ್‌ನಿಂದ ಹೊರಬಂದಾಗ ಅರುಂಧತಿ ಮನೆಯ ಬಾಗಿಲಿನಲ್ಲಿ ನಿಂತಿದ್ದಳು. ವಿಶಾಲವಾದ ನಡುಮನೆಯಲ್ಲಿ ಮೆತ್ತನೆಯ ಸೋಫಾದ ಮೇಲೆ ಕುಳಿತು ದೊಡ್ಡ ಪರದೆಯಂಥ ಟಿವಿಯನ್ನು ನೋಡುತ್ತಿದ್ದ ವ್ಯಕ್ತಿ ಮಾಧವನ್ ಪಿಳ್ಳೈ ಎಂಬುದು ತಿಳಿದಿತ್ತು. ಪರದೆಯ ಮೇಲೆ ಸುಂದರವಾಗಿದ್ದ ಗಾಯಕಿಯೊಬ್ಬಳು, 'ಆ ಲೌಟ್ ಕೆ ಆಜಾ ಮೇರೆ ಮೀಟ್ ತುಜೆ ಮೇರೆ ಗೀತ್ ಬುಲಾತೆ ಹೈ' ಎಂಬ ಹಳೆಯ ಹಿಂದಿ ಹಾಡನ್ನು ಮಧುರವಾಗಿ ಹಾಡುತ್ತಿದ್ದಳು. ನನ್ನನ್ನು ನೋಡಿದ ಮಾಧವನ್ ಪಿಳ್ಳೈ ಟಿವಿ ವಾಲ್ಯೂಮ್ ಕಡಿಮೆ ಮಾಡಿದ್ದರು. ನಮಸ್ಕಾರ ಹೇಳಿದ್ದೆ.

'ನಮಸ್ಕಾರ ಕ್ರಾಂತಿ ಕಿರಣ್ ರೆಡ್ಡಿಯವರಿಗೆ. ಇನ್ನು ಮುಂದೆ ನಿಮ್ಮನ್ನು ಕೆಕೆಆರ್ ಎಂದು ಕರೆಯುತ್ತೇನೆ. ನಾನು ಬೆಂಗಳೂರನ್ನು ಅನೇಕ ಸಾರಿ ನೋಡಿದ್ದೀನಿ. ಕೇರಳದವರಂತೂ ತುಂಬಾ ಜನ ಇದ್ದಾರೆ. ನೀವು ತುಂಬಾ ಚೆನ್ನಾಗಿ ಮಲೆಯಾಳಂ ಮಾತನಾಡ್ತೀರಿ ಅಂತ ರಾಘವರೆಡ್ಡಿ ಹೇಳಿದ್ರು. ಬೈದಿಬೈ ಕ್ರಾಂತಿ ಎಂಬ ಹೆಸರು ಇಟ್ಕೊಂಡಿದ್ದೀರಿ, ಕಮ್ಯುನಿಸ್ಟರಾ...' ಎಂದು ಟೀವಿಯಲ್ಲಿ ಕಣ್ಣು ನೆಟ್ಟು ಕೇಳಿದ್ದರು.

'ಹಾಗೇನೂ ಇಲ್ಲ' ಹೇಳಿದ್ದೆ ನಾನು. ಗಾಜಿನ ಲೋಟದಲ್ಲಿ ಬಿಸಿಬಿಸಿ ಚಹ ಬಂದಿತ್ತು. ಅವರೂ ಚಹಾದ ಕಪ್ಪನ್ನು ಬಾಯಿಗಿಡುತ್ತಾ, 'ನನಗೆ ಹಳೆಯ ಹಿಂದಿ ಮತ್ತು ಮಲೆಯಾಳಂ ಹಾಡುಗಳೆಂದರೆ ಪ್ರಾಣ. ಟೀವಿಯಲ್ಲಿ ಈ ಹಾಡನ್ನು ಹೇಳ್ತಾ ಇದಾಳಲ್ಲ, ಈಕೆಯ ಹೆಸರು ರೇಖಾ ರಾವಲ್ ಅಂತ. ಈ ಹಾಡು ರಾಣಿ ರೂಪಮತಿ ಚಿತ್ರದ್ದ . ಒಮ್ಮೆ ಈಕೆಯನ್ನು ಕಾಣಬೇಕೆಂದು ಮುಂಬಯಿ, ಪೂನಾಗೂ ಹೋಗಿ ಬಂದೆ. ಆಕೆ ಯಾವುದೋ ಪ್ರೋಗ್ರಾಂ ಮೇಲೆ ವಿದೇಶಕ್ಕೆ ಹೋಗಿದ್ದಳಂತೆ. ಮತ್ತೆ ಕಾಣಲು ಹೋಗಲಿಲ್ಲ. ದಿನಕ್ಕೊಮ್ಮೆಯಾದರೂ ಈ ಹಾಡನ್ನು ಕೇಳ್ತೀನಿ. ನಮ್ಮ ಮಲೆಯಾಳಂ ಹಾಡುಗಾರ ಜೇಸುದಾಸ್ ನಮ್ಮ ಮನೆಗೆ ಐದಾರು ಸಾರಿಯಾದರೂ ಬಂದಿರಬೇಕು. ನೀವು ಕುಳಿತಿರುವ ಜಾಗದಲ್ಲೇ ಕುಳಿತು ಸೊಗಸಾದ ಹಾಡುಗಳನ್ನು ಹಾಡಿದ್ದಾರೆ...' ಎಂದು ಮಾಧವನ್ ಪಿಳ್ಳೈರವರ ಸಂಗೀತದ ಹುಚ್ಚಿನ ಬಗ್ಗೆ ಹೆಮ್ಮೆಯೆನಿಸಿತ್ತು ನನಗೆ.

'ನಿಜಕ್ಕೂ ನಿಮ್ಮ ಹವ್ಯಾಸ ಮೆಚ್ಚಿಕೊಳ್ಳುವಂಥದ್ದು. ಶ್ರೀಮಂತರಲ್ಲಿ ಸಾಮಾನ್ಯವಾಗಿ ಸಾಹಿತ್ಯ ಸಂಗೀತದ ಬಗ್ಗೆ ಒಲವು ಕಡಿಮೆಯಿರುತ್ತದೆ' ಮೆಚ್ಚುಗೆ ವ್ಯಕ್ತಪಡಿಸಿದ್ದೆ.

'ಏನಂದಿರಿ? ಶ್ರೀಮಂತರೆಂದಿರಾ? ಶ್ರೀಮಂತಿಕೆ ಯನ್ನು ನೀವು ಹೇಗೆ ಡಿಫೈನ್ ಮಾಡ್ತೀರಿ. ನನಗದರ ಬಗ್ಗೆ ನಂಬಿಕೆಯಿಲ್ಲ ಬಿಡಿ. ಅದಿರಲಿ, ಸಂಗೀತ ಕೆಲವೊಮ್ಮೆ ದುಃಖ ಮತ್ತು ನೋವನ್ನು ಮರೆಸುತ್ತದೆ. ಅದೊಂದು ವಿಚಿತ್ರವಾದ ಮೋಹಕ ಜಗತ್ತು. ಅಂದಹಾಗೆ, ನಿಮ್ಮನ್ನು ನೋಡಿದರೆ ನನ್ನ ಮಗ ವಿಕ್ರಂ ಪಿಳ್ಳೈನನ್ನು ನೋಡಿದಂತೆ ಆಗುತ್ತದೆ...' ಆತನ ಕೊನೆಯ ಮಾತುಗಳು ತುಸು ಭಾರವಾದಂತೆ ಕಂಡಿದ್ದವು.

'ಪಪ್ಪಾ...' ಅರುಂಧತಿ ಮಧ್ಯೆ ಬಾಯಿ ಹಾಕಿ ಏನನ್ನೋ ಸೂಚಿಸಿದಂತಿತ್ತು. ಹಾಡು ಮುಗಿದಿತ್ತು. ಮಾಧವನ್ ಪಿಳ್ಳೈ ನನ್ನ ಕಡೆ ದೃಷ್ಟಿಸಿ ಮಾತನಾಡುವುದನ್ನು ಮುಂದುವರಿಸಿದ್ದರು:

'ಅರುಂಧತಿ ವಿಕ್ರಂ ಪಿಳ್ಳೈಗಿಂತಲೂ ಹತ್ತು ವರ್ಷ ಚಿಕ್ಕವಳು. ಅವನು ಹುಟ್ಟಿದ ಮೇಲೆ ನಮಗೆ ಮತ್ತೆ ಮಕ್ಕಳಾಗುವುದಿಲ್ಲ ಅಂದುಕೊಂಡಿದ್ದೆವು. ಆದರೆ ದೇವರು ಬುದ್ಧಿವಂತಳಾದ ಮಗಳನ್ನೇ ಕರುಣಿಸಿದ. ವಿಕ್ರಂ ಇಂಜಿನಿಯರಿಂಗ್ ಮುಗಿಸಿ ಎಂ.ಎಸ್. ಮಾಡಲು ಅಮೆರಿಕಕ್ಕೆ ಹೋದ. ಅಲ್ಲಿ ಯಾರೋ ಮುಸ್ಲಿಂ ಹುಡುಗಿಯನ್ನು ಪ್ರೀತಿಸಿದ. ಹುಡುಗಿಯೂ ಶ್ರೀಮಂತಳೇ. ದುಬೈನ ತೈಲ ಕಂಪನಿಯೊಂದರ ಮಾಲೀಕನ ಮಗಳು. ನಾನೇನೂ ವಿರೋಧ ವ್ಯಕ್ತಪಡಿಸಲಿಲ್ಲ. ಆದರೆ ಅವನೇ ವಾಪಸ್ಸು ಬರಲಿಲ್ಲ. ಬದಲಿಗೆ ದುಬೈಗೆ ಹೋಗಿ ಹೆಂಡತಿಯ ಮನೆಯಲ್ಲೇ ಇದ್ದ. ಮಾವನ ತೈಲ ಕಂಪನಿಯ ಎಂ.ಡಿ. ಆಗಿದ್ದನಂತೆ. ಇಬ್ಬರು ಮಕ್ಕಳು. ಮೂರು ವರ್ಷಗಳ ಹಿಂದೆ ಒಂದು ದಿನ ಫೋನ್ ಮಾಡಿ ಹೆಂಡತಿ ಮಕ್ಕಳೊಂದಿಗೆ ಬರುವುದಾಗಿ ಹೇಳಿದ್ದ. ನಮ್ಮ ಮನೆಯಲ್ಲಿ ಹೇಳತೀರದ ಖುಷಿ ಮನೆಮಾಡಿತ್ತು.

ಕೆಲಸಗಾರರಿಗೆಲ್ಲ ತಲಾ ಇಪ್ಪತ್ತೈದು ಸಾವಿರ ಬೋನಸ್ ಅನೌನ್ಸ್ ಮಾಡಿದ್ದೆ. ಆದರೆ ಫೋನು ಮಾಡಿದ ಮಾರನೆಯ ದಿನದಂದೇ ದುಬೈನಿಂದ ಸೌತ್ ಆಫ್ರಿಕಾಗೆ ಪ್ರಯಾಣಿಸುತ್ತಿದ್ದ ವಿಮಾನ ಅಪಘಾತದಲ್ಲಿ ಸುಮಾರು ನೂರೈವತ್ತು ಜನರೊಂದಿಗೆ ಅವನೂ ಸತ್ತುಹೋದ ಸುದ್ದಿ ಬಂದಿತ್ತು. ಆ ಸುದ್ದಿ ಕೇಳಿ ನನ್ನ ಹೆಂಡತಿಗೆ ಹಾರ್ಟ್ ಅಟ್ಯಾಕ್ ಆಗಿ ಅವಳೂ ಅವತ್ತೇ ಸತ್ತುಹೋದಳು. ಅವೊತ್ತು ನನ್ನ ಮಗಳು ತಾಯಿಯಂತೆ ನನ್ನನ್ನು ಸಂತೈಸಿದ್ದಳು. ನಾನು ದೇಶಕ್ಕೆ ಸ್ವಾತಂತ್ರ್ಯ ಬಂದ ವರ್ಷದಲ್ಲಿ ಹುಟ್ಟಿದವನು. ನೋಡಿ ಈಗಲೂ ಎಷ್ಟು ಗಟ್ಟಿಮುಟ್ಟಾಗಿ ಇದ್ದೀನಿ...' ಸಣ್ಣದಾಗಿ ನಕ್ಕಿದ್ದರು ಮಾಧವನ್ ಪಿಳ್ಳೈ. ಮಾತುಗಳಲ್ಲಿ ತೆಳುವಾದ ಭಾವುಕತೆ ಇದ್ದರೂ ದುಃಖ ಇರಲಿಲ್ಲ.

(ಸಶೇಷ)